# ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯ: ಸಂವಿಧಾನದ 15ಬಿ (4) ಮತ್ತು 16(4) ನೇ ವಿಧಿಗಳ ಪ್ರಕಾರ ಶೈಕ್ಷಣಿಕ ರಿಯಾಯಿತಿಗಳನ್ನು ಮತ್ತು ಉದ್ಯೋಗ ಮೀಸಲಾತಿ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಘೋಷಣಾ ಪತ್ರ ಸಲ್ಲಿಸುವ ನಮೂನೆ ನಿಗದಿ ಪಡಿಸುವ ಕುರಿತು.

ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂ ಎಲ್ 15 ಬಿಸಿಎಸ್ 85
ದಿನಾಂಕ: 17ನೇ ಅಕ್ಟೋಬರ್ 87

ಓದಲಾಗಿದೆ :-

1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂ ಎಲ್ 12 ಬಿಸಿಎಸ್ 77
ದಿನಾಂಕ: 22-2-1977
2) ಸರ್ಕಾರಿಆದೇಶ ಸಂಖ್ಯೆ: ಎಸ್‌ಡಬ್ಲ್ಯೂ ಎಲ್ 123 ಬಿಸಿಎ 79
ದಿನಾಂಕ: 1-5-1979
3) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂ ಎಲ್ 57 ಬಿಸಿಎಸ್ 80
ದಿನಾಂಕ: 3-3-82
4) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂ ಎಲ್ 66 ಬಿಸಿಎ 86
ದಿನಾಂಕ: 13-10-86.
5) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂ ಎಲ್ 66 ಬಿಸಿಎ:86
ದಿನಾಂಕ: 19-11-86.
6) ನಿರ್ದೇಶಕರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ: ಹಿವಅನಿ:ವಿವೇ-2 ಕ್ರಸಂ:17:87-88
ದಿನಾಂಕ: 8-6-87

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರಿ ಆದೇಶಗಳ ಪ್ರಕಾರ ಯಾವುದೇ ವ್ಯಕ್ತಿ ತಾನು ಹಿಂದುಳಿದ ಸಮುದಾಯ, ಹಿಂದುಳಿದ ಜಾತಿ, ಹಿಂದುಳಿದ ಬುಡಕಟ್ಟು ಅಥವಾ ಹಿಂದುಳಿದ ವಿಶೇಷ ಗುಂಪು ಎಂದು ಮೀಸಲಾತಿಯನ್ನು ಪಡೆಯಲು ಬಯಸಿದಲ್ಲಿ ಉಲ್ಲೇಖ(3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ನಿಗದಿ ನಿಗದಿಪಡಿಸಿರುವ ನಮೂನೆಯಲ್ಲಿ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಸಂಬಂಧಪಟ್ಟ ಅಧಿಕಾರಿಗಳ ಮ ಮುಖಾಂತರ ಪ್ರಮಾಣಪತ್ರವನ್ನು ಹಾಜರುಪಡಿಸಬೇಕಾಗುತ್ತಿತ್ತು.

ಅಲ್ಲದೆ, ಉಲ್ಲೇಖ 3 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಶೈಕ್ಷಣಿಕ ರಿಯಾಯಿತಿಗಳನ್ನು ಪಡೆಯಲು ಬಯಸುವ ಹಿಂದುಳಿದ ಸಮುದಾಯ ಹಿಂದುಳಿದ ಜಾತಿ ಮತ್ತು ಹಿಂದುಳಿದ ಬುಡಕಟ್ಟುಗಳಿಗೆ ಸೆ ಸೇರಿದ ಅಭ್ಯರ್ಥಿಗಳು ನಮೂನೆ-2 ರಲ್ಲಿ ಮತ್ತು ಹಿಂದುಳಿದ ವಿಶೇಷ ಗುಂಪಿಗೆ ಸೇರಿದ ಅಭ್ಯರ್ಥಿಗಳು ನಮೂನೆ 3ರಲ್ಲಿಯೂ ಸದರಿ ಸರ್ಕಾರಿ ಆದೇಶದ ಅನುಬಂಧ 1 ಮತ್ತು 2ರಲ್ಲಿ ನಿಗದಿಪಡಿಸಿದಂತೆ ಘೋಷಣ ಪತ್ರ: ಪ್ರಮಾಣ ಪತ್ರ ನಿಗದಿಪಡಿಸಿತ್ತು.

ಪ್ರಸ್ತುತ ಮೇಲಿನ ಎಲ್ಲಾ ಆದೇಶಗಳನ್ನು ತೆಗೆದು ಹಾಕಿ ಶ್ರೀ ವಸಂತಕುಮಾರ ಮತ್ತು ಇನ್ನೊಬ್ಬರು ಕರ್ನಾಟಕ ರಾಜ್ಯ ಸರ್ಕಾರದ ವಿರುದ್ಧ ನಡೆಸಲಾದ ಮೊಕದ್ದಮೆಗೆ ಸಂಬಂಧಿಸಿದಂತೆ ಭಾರತದ ಸರ್ವೋಚ್ಚ ನ್ಯಾಯಾಲಯವು ನೀಡಿದ ಮಾರ್ಗದರ್ಶನಗಳನ್ನು ಪರಿಗಣಿಸಿ ಮತ್ತು ಹಿಂದುಳಿದ ಸಮುದಾಯ, ಹಿಂದುಳಿದ ಜಾತಿ ಮತ್ತು ಹಿಂದುಳಿದ ಬುಡಕಟ್ಟುಗಳ ಸಾಮಾಜಿಕ

ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ಮಾಹಿತಿಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ಪದ್ಧತಿಗಳು ಇವುಗಳ ಪ್ರತಿ ಸಮುದಾಯದ ಬಡತನ, ಜೀವನ ವರ್ಗ, ಜೀವನ ಮಟ್ಟ, ಅಭ್ಯಾಸಗಳು ಮತ್ತು ಪದ್ಧತಿಗಳು ಇವುಗಳ ಪ್ರತಿ ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ಪರಿಗಣಿಸಿ ಉಲ್ಲೇಖ(4) ರಲ್ಲಿನ ಸರ್ಕಾರದ ಆದೇಶದಲ್ಲಿ ಸರ್ಕಾರವು ಹಿಂದುಳಿದ ವರ್ಗಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿದೆ.

(1) ಗುಂಪು –ಎ
2) ಗುಂಪು–ಬಿ
3) ಗುಂಪು–ಸಿ
4) ಗುಂಪು–ಡಿ
ಮತ್ತು (5) ಗುಂಪು–ಇ(ಹಿಂದುಳಿದ ವಿಶೇಷ ಗುಂಪು)

ಮೇಲ್ಕಂಡ ವರ್ಗೀಕರಣದಿಂದಾಗಿ 15(4) ನೇ ಮತ್ತು 16(4) ನೇ ವಿಧಿಯ ಪ್ರಕರ ಮೀಸಲಾತಿಯನ್ನು ಪಡೆಯಲು ಹಿಂದುಳಿದ ವರ್ಗಗಳ ಅಡಿಯಲ್ಲಿ ಅಭ್ಯರ್ಥಿ ಯಾವ ನಮೂನೆಯಲ್ಲಿ ಜಾತಿ ಮತ್ತು ಆದಾಯದ ಘೋಷಣಾ ಪತ್ರಗಳು ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು ಎನ್ನುವ ಬಗ್ಗೆ ಕೆಲವು ಸಮಸ್ಯೆಗಳು ಉದ್ಭವಿಸಿದವು.

ನಿರ್ದೇಶಕರು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ ಪತ್ರ(6) ರಲ್ಲಿ ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಜಾತಿ ಮತ್ತು ಆದಾಯದ ಘೋಷಣಾ ಪತ್ರ: ಪ್ರಮಾಣ ಪತ್ರ ಸಲ್ಲಿಸಲು ಪ್ರಸ್ತುತ ಜಾರಿಯಲ್ಲಿರುವ ನಮೂನೆಯನ್ನು ಬದಲಾಯಿಸುವ ಬಗ್ಗೆ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿದ್ದಾರೆ. ಅದರಂತೆ ಆದೇಶ.

ಆದೇಶ

ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಗಣಿಸಿ ಮತ್ತು ಮೇಲಿನ ಎಲ್ಲಾ ಸರ್ಕಾರಿ ಆದೇಶಗಳ ಭಾಗಶ: ಬದಲಾವಣೆಯೊಂದಿಗೆ ಸರ್ಕಾರದ ಆದೇಶ ಸಂಖ್ಯೆ: ಎಸಡಬ್ಲ್ಯೂಡಿ ಎಲ 66 ಬಿಸಿಎ 86 ದಿನಾಂಕ: 13–10–86 ರಂತೆ ವರ್ಗೀಕರಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧ 1, 2 ಮತ್ತು 3 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ತಮ್ಮ ಜಾತಿ, ಮತ್ತು ಆದಾಯದ ಘೋಷಣಾ ಪತ: ಪ್ರಮಣ ಪತ್ರ ಸಲ್ಲಿಸುವಂತೆ ಸರ್ಕಾರವು ಈ ಮೂಲಕ ಆದೇಶಿಸುತ್ತದೆ.

ಅನುಬಂಧ–1

(1) ನಮೂನೆ ಸಂಖ್ಯೆ: ಎ ' ಗುಂಪಿಗೆ ಸೇರಿದ ಅಭ್ಯರ್ಥಿಗಳಿಗಾಗಿ,

ಅನುಬಂಧ–2

2) ನಮೂನೆ ಸಂಖ್ಯೆ: –3 ' ಬಿ '' ಸಿ ' ಮತ್ತು ' ಡಿ ' ಗುಂಪಿನ ಅಭ್ಯರ್ಥಿಗಳಿಗಾಗಿ

ಅನುಬಂಧ–3

3) ನಮೂನೆ ಸಂಖ್ಯೆ:–4 ' ಇ ' ಗುಂಪಿಗೆ ಸೇರಿದ ಅಭ್ಯರ್ಥಿಗಳಿಗಾಗಿ (ಹಿಂದುಳಿದ ವಿಶೇಷ ಗುಂಪು)

2) ' ಎ ' ಗುಂಪಿನ ಅಭ್ಯರ್ಥಿಗಳಿಗೆ ಒಮ್ಮೆ ನೀಡಿದ ಜಾತಿ ಮತ್ತು ಆದಾಯ ಪ್ರಮಾಣ ಪತಗಳು ಅವುಗಳನ್ನು ನೀಡಿದ ಅಧಿಕಾರಿಯು ಅವುಗಳನ್ನು ರದ್ದು ಪಡಿಸುವವರೆಗೂ ಕ್ರಮ ಬದ್ಧವಾಗಿ ರುತ್ತವೆ. ಆದರೆ ಪ್ರಾಧಿಕಾರವು ರದ್ದು ಪಡಿಸುವ ದಿನದಲ್ಲಿ ಕ್ರಮವನ್ನು ಪ್ರಾರಂಭಿಸಿದ ಕೂಡಲೇ

ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಸೂಕ್ತ ಅವಕಾಶವನ್ನು ಕೊಡತಕ್ಕದ್ದು.

3) 'ಎ' ಗುಂಪಿನ ಅಭ್ಯರ್ಥಿಗಳಿಗೆ ಅನುಬಂಧ-1, ನಮೂನೆ-2 ರಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಿಗಳಾದ ತಾಲ್ಲೂಕು ಮಟ್ಟದ ತಹಸೀಲ್ದಾರರು ಮತ್ತು ನಗರ ಪ್ರದೇಶಗಳಲ್ಲಿನ ಪುರಸಭೆಯ ಮುಖ್ಯಾಧಿಕಾರಿಗಳು- ನಗರ ಸಭೆಯ ಆಯುಕ್ತರು ನೀಡಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಫೋಟೋ ಪ್ರತಿ ಅಥವಾ ನಕಲನ್ನು ಕರ್ನಾಟಕ ಸರ್ಕಾರದ ಸೇವೆಯಲ್ಲಿರುವ ಗ್ರೂಪ್- ಎ ಮತ್ತು 'ಬಿ' ಅಧಿಕಾರಿಗಳಿಂದ ಮೂಲ ಪ್ರಮಾಣ ಪತ್ರದ ಆಧಾರದ ಮೇಲೆ ದೃಢೀಕರಣ ಪಡೆದು ಒದಗಿಸಿದ ಪ್ರತಿಗಳನ್ನು ಸಂವಿಧಾನದ ಪರಿಚ್ಛೇದ 15(4) ಮತ್ತು 16(4) ನೇ ವಿಧಿಗಳಿಗೆ ಸಂಬಂಧಿಸಿದ ಮೀಸಲಾತಿಯ ಸೌಲಭ್ಯಗಳನ್ನು ನೀಡುವುದಕ್ಕಾಗಿ ರಾಜ್ಯ ಸರ್ಕಾರದ ಪ್ರಾಧಿಕಾರಗಳು ಸ್ಥಳೀಯ ಸಂಸ್ಥೆಗಳು ವಿಶ್ವವಿದ್ಯಾಲಯಗಳು, ಮಂಡಳಿಗಳು ಸಾರ್ವಜನಿಕ ಅಧೀನ ಸಂಸ್ಥೆಗಳು ನಿಗಮಗಳು ಸಹಕಾರ ಸಂಸ್ಥೆಗಳು ಸಹಾಯಧನಪಡೆಯುವ ಸಂಸ್ಥೆಗಳು, ಕರ್ನಾಟಕ ಸರ್ಕಾರದ ನಿಯಂತ್ರಣದಲ್ಲಿರುವ ಆಯೋಗಗಳು ಒಪ್ಪಿಕೊಳ್ಳುವಂತೆ ಆದೇಶಿಸಿದೆ. ಆದರೆ ಇಂತಹ ನಕಲು ಪ್ರತಿಗಳು-ಫೋಟೋ ಪ್ರತಿಗಳು ತಿದ್ದುಪಡಿಗಳಿಂದ ಬದಲಾವಣೆಗಳಿಂದ ಅಥವಾ ಇತರ ಯಾವುದೇ ರೀತಿಯ ಮೋಸದ ಬರಹಗಳಿಗೆ ಒಳಗಾಗಿಲ್ಲ ಎಂಬುದನ್ನು ಖಚಿತ ಮಾಡಿಕೊಳ್ಳಬೇಕು. ಅದಾಗ್ಯೂ, ನಕಲು ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಆಧಾರದ ಮೇಲೆ ಮೀಸಲಾತಿಯ ಸೌಲಭ್ಯಗಳನ್ನು ನೀಡುವ ಪ್ರಾಧಿಕಾರಿಗಳು ಯಾವುದೇ ಸಮಯದಲ್ಲಿ, ಅಂತಹ ಅಭ್ಯರ್ಥಿಗಳಿಂದ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಕೊಳ್ಳುವ ಮತ್ತು ನಕಲು ಪ್ರಮಾಣಪತ್ರವು ಸರಿ ಎಂಬುದನ್ನು ಪರಿಶೀಲಿಸಿ ಆ ಬಗ್ಗೆ ಅವಶ್ಯ ದಾಖಲೆಗಳನ್ನು ಮಾಡಿಕೊಂಡು ಅಭ್ಯರ್ಥಿಗಳಿಗೆ ಹಿಂತಿರುಗಿಸುವ ಅಧಿಕಾರ ಹೊಂದಿರುತ್ತಾರೆ. ಮತ್ತು ವಿದ್ಯಾ ಸಂಸ್ಥೆಗಳಿಗೆ ಪ್ರಥಮ ಬಾರಿಗೆ ಪ್ರವೇಶ ನೀಡುವ ಪ್ರಾಧಿಕಾರಿಗಳು ಯಾವುದೇ ಸಮಯ ದಲ್ಲಿ ಅಂತಹ ಅಭ್ಯರ್ಥಿಗಳಿಂದ ಮೂಲ ಜಾತಿ ಮತ್ತು ಆದಾ ಯ ಪ್ರಮಾಣ ಪತ್ರಗಳನ್ನು ಪಡೆದು ಕೊಳ್ಳುವ ಮತ್ತು ನಕಲು ಪ್ರಮಾಣಪತ್ರವು ಸರಿ ಎಂಬುದನ್ನು ಪರಿಶೀಲಿಸಿ ಆ ಬಗೆ ಅವಶ್ಯದಾಖಲೆಗಳನ್ನು ಮಾಡಿಕೊಂಡು ಅಭ್ಯರ್ಥಿಗಳಿಗೆ ಹಿಂತಿರುಗಿಸುವ ಅಧಿಕಾರಿ ಹೊಂದಿರುತ್ತಾರೆ. ಮತ್ತು ವಿದ್ಯಾ ಸಂಸ್ಥೆಗಳಿಗೆ ಪ್ರಥಮ ಬಾರಿಗೆ ಪ್ರವೇಶ ನೀಡುವ ಮುನ್ನ ಹಾಗೂ ಯಾವುದೇ ಹುದ್ದೆಗಳಿಗೆ ನೇಮಕ ಮಾಡುವ ಮುನ್ನ ಅತ್ಯವಶ್ಯಕವಾಗಿ ಇಂತಹ ಪರಿಶೀಲನೆಯನ್ನು ಮಾಡಲು ಆದೇಶಿಸಿದೆ. ಗುಂಪಿನ ಅಭ್ಯರ್ಥಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುವ ಪ್ರಾಧಿಕಾರಗಳು ಈ ಆದೇಶದ ಅನುಬಂಧ-4 ರಲ್ಲಿ ಹೇಳಿರುವ ನಿಗದಿತ ನಮೂನೆಯಲ್ಲಿ ರಿಜಿಸ್ಟರನ್ನು ನಿರ್ವಹಿಸುವುದು.

4) 'ಎ' ಗುಂಪಿಗೆ ಸೇರಿದ ಅಭ್ಯರ್ಥಿಗಳು ಆದಾಯಮಿತಿಗೆ ಒಳಪಟ್ಟು ಮೀಸಲಾತಿ ಸೌಲಭ್ಯಗಳನ್ನು ಪಡೆಯಬಯಸುವ ಸಂದರ್ಭದಲ್ಲಿ ಅವರ ತಂದೆ, ತಾಯಿ ಪೋಷಕರು ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಕುಟುಂಬದ ವಾರ್ಷಿಕ ಆದಾಯದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪ್ರತಿ ವರ್ಷ ಘೋಷಿಸಿಕೊಳ್ಳಬೇಕು. ಆದರೆ ಸಲ್ಲಿಸಿರುವ ಮಾಹಿತಿ ಸರಿಯಿಲ್ಲ ಎಂದು ಕಂಡು ಬಂದಲ್ಲಿ ಅವರನ್ನು ಕ್ರಿಮಿನಲ್ ವಿಚಾರಣೆಗೆ ಒಳಪಡಿಸುವುದಲ್ಲದೆ ಅಂತಹ ಪ್ರಮಾಣಪತ್ರಗಳ ಆಧಾರದ ಮೇಲೆ ಅಭ್ಯರ್ಥಿಗಳು ಪಡೆದ ಸವಲತ್ತುಗಳು ಮತ್ತು ವಿನಾಯಿತಿಗಳನ್ನು ಕಳೆದುಕೊಳ್ಳುತ್ತಾರೆ.

5) ಬಿ, ಸಿ, ಡಿ ಮತ್ತು ಇ ಗುಂಪುಗಳಿಗೆ ಜಾತಿ ಮತ್ತು ಆದಾಯದ ಘೋಷಣಾ ಪತ್ರಗಳು : ಪ್ರಮಾಣ ಪತ್ರಗಳನ್ನು ನೀಡುವ ಅಧಿಕಾರವನ್ನು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧ-2 ಮತ್ತು 3ರಲ್ಲಿ ನಿಗದಿಪಡಿಸಿರುವ ನಮೂನೆ ಸಂಖ್ಯೆ 3 ಮತ್ತು 4ರಲ್ಲಿ ತಿಳಿಸಿರುವ ಅಧಿಕಾರಿಗಳು ಹೊಂದಿರುತ್ತಾರೆ.